ದಿನಾಂಕ:25-06-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು
**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:-**

ದಾವಾಸ್ವತ್ತನ್ನು ನನ್ನ ಪತಿ ನಾಗರಾಜ್ ರವರು ಖರೀದಿಸಿರುತ್ತಾರೆ. ಸದರಿ ಸ್ವತ್ತನ್ನು ಸಾಕಮ್ಮ ಎಂಬುವವರಿಂದ ಖರೀದಿಸಿರುತ್ತಾರೆ. ಸಾಕಮ್ಮನವರಿಗೆ ಸ್ವತ್ತು ಯಾವ ರೀತಿಯಾಗಿ ಬಂದಿದೆ ಎಂದು ನನ್ನ ಪತಿಗೆ ಗೊತ್ತು ಸದರಿ ವಿಚಾರವನ್ನು ನನಗೆ ತಿಳಿಸಿಲ್ಲ. ದಾವಾಸ್ವತ್ತನ್ನು ಖರೀದಿಸಿ ಸುಮಾರು 5-6 ವರ್ಷಗಳಾಗಿರಬಹುದು. ನನ್ನ ಪತಿ ಸಾಕಮ್ಮನವರಿಂದ ಹೆಂಚಿನ ಮನೆಯನ್ನು ಖರೀದಿಸಿರುತ್ತಾರೆ. ಸದರಿ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ಪತಿ ಈಗ ಜೀವಂತವಾಗಿಲ್ಲ. ಅವರು ಮೃತಪಟ್ಟು ಒಂದು ವರ್ಷವಾಗಿದೆ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ನನ್ನ ಪತಿ ಬದುಕಿದ್ದರು. ನನ್ನ ಹೆಸರಿಗೆ ಕ್ರಯಕ್ಕೆ ಪಡೆದಿದ್ದು ಖಾತೆ ಸಹಾ ನನ್ನ ಹೆಸರಿನಲ್ಲಿಯೇ ಆಗಿರುತ್ತದೆ. ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ, ಸೂರ್ಯ ಉದಯಿಸುವ ಕಡೆ ದೇವೇಂದ್ರಪ್ಪನ ಸ್ವತ್ತು, ಸೂರ್ಯ ಮುಳುಗುವ ಕಡೆ ಪ್ರತಿವಾದಿಯ ಸ್ವತ್ತು, ನಮ್ಮ ಮನೆಯ ಎದುರಿಗೆ ರಸ್ತೆ ಇದೆ, ಹಿಂಭಾಗಕ್ಕೆ ಕೆರೆ ಇದೆ. ನಾನು ಹೇಳಿದ ಆಜುಬಾಜಿನಂತೆ ಕ್ರಯಕ್ಕೆ ಪಡೆದಿರುತ್ತೇನೆ.

ನಾನು ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಪ್ರತಿವಾದಿಯ ಮಾವ ನಾರಾಯಣ ರವರು ಪ್ರತಿವಾದಿಯ ಸ್ವತ್ತನ್ನು ಖರೀದಿ ಮಾಡಿದ್ದರು. ಪ್ರತಿವಾದಿ ಮಾವನಿಗೆ ಅಂತರಗಟ್ಟೆ ಗ್ರಾಮ ಪಂಚಾಯಿತಿಯವರು ಪೂರ್ವ ಪಶ್ಚಿಮ 60 ಅಡಿ ಉತ್ತರ ದಕ್ಷಿಣ-40 ಅಡಿಗಳ ಸ್ವತ್ತನ್ನು ಮಂಜೂರಾತಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಮಾವನಿಗೆ ಮಂಜೂರಾದ ಸ್ವತ್ತಿನಲ್ಲಿ ಆತನ ಪತ್ನಿ ಸುಮಿತ್ರಮ್ಮ ಸ್ವಾಧೀನದಲ್ಲಿದ್ದು ಪ್ರಸ್ತುತ ಆಕೆ ಮೃತಪಟ್ಟಿದ್ದು ಈಗ ಆಕೆ ಸ್ವಾಧೀನದಲ್ಲಿದ್ದಾರೆ. ನಾನು ಸ್ವತ್ತನ್ನು ಖರೀದಿಸಿದ ನಂತರ ಗ್ರಾಮ ಪಂಚಾಯಿತಿಯಿಂದ ಅಳತೆ ಮಾಡಿಸಿದ್ದೇನೆ. ಆ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರಬಹುದು. ಸದರಿ ಅಳತೆ ಮಾಡಿದ ನಂತರ ಪ್ರತಿವಾದಿ ನಮಗೆ ಸೇರಿದ 6½ ಅಡಿ ಸ್ವತ್ತನ್ನು ಒತ್ತುವರಿ ಮಾಡಿರುವುದಾಗಿ ತಿಳಿದು ಬಂದಿತ್ತು. ಅಳತೆ ಕಾರ್ಯವನ್ನು ಯಾವಾಗ ಮಾಡಿರುತ್ತಾರೆಂದು ನಿರ್ದಿಷ್ಟವಾಗಿ ಗೊತ್ತಿಲ್ಲ. ಸದರಿ ಅಳತೆಯನ್ನು ನಾವು ಕೊಂಡುಕೊಳ್ಳುವ ಪೂರ್ವದಲ್ಲಿ ಮಾಡಿದ್ದು ಅ ಕುರಿತು ಪೂರ್ಣ ಮಾಹಿತಿ ಇಲ್ಲ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಅಳತೆಯನ್ನು ಮಾಡಿಸಿದ್ದೆವು.

ನಾವು 15 ದಿನಗಳ ಕಾಲ ಹೊಸದುರ್ಗಕ್ಕೆ ಹೋಗಿದ್ದೆವು. ಸುಮಾರು 3-4 ವರ್ಷಗಳ ಹಿಂದೆ ಹೋಗಿರಬಹುದು. ನಾವು ಊರಿನಲ್ಲಿ ಇಲ್ಲದ ಸಮಯದಲ್ಲಿ ಪ್ರತಿವಾದಿಯರು ಒತ್ತುವರಿ ಮಾಡಿ ಮೆಟ್ಟಿಲುಗಳನ್ನು ನಿರ್ಮಿತಿ ಮಾಡಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ

ಮಾರಾಟ ಮಾಡಿದ ಸಾಕಮ್ಮನವರಿಗೆ ಅಂತರಗಟ್ಟೆ ಗ್ರಾಮ ಪಂಚಾಯಿತಿಯಿಂದ ಸ್ವತ್ತನ್ನು ಮಂಜೂರಾತಿ ಮಾಡಿದ್ದರು ಎಂದರೆ ಸರಿ. ನಾವು ಪೋಲೀಸ್ ಠಾಣೆಗೆ ದೂರನ್ನು ನೀಡಲು ಹೋದಾಗ ಪೋಲೀಸರು ಮೌಖಿಕವಾಗಿ  ನ್ಯಾಯಾಲಯದಲ್ಲಿ ದಾವೆಯನ್ನು ಹೂಡುವಂತೆ ಹೇಳಿದ್ದರು. ಪ್ರತಿವಾದಿ ಅವರ ಸ್ವತ್ತನ್ನು ಆತನ ಅತ್ತೆಯಿಂದ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಅವರಿಗೆ ಸೇರಿದ ಜಾಗದಲ್ಲಿ 4½ ಅಡಿಯಲ್ಲಿ ಮೆಟ್ಟಿಲುಗಳನ್ನು ನಿರ್ಮಿತಿ ಮಾಡಿದ್ದು ನನಗೆ ಸೇರಿದ ಯಾವುದೇ ಸ್ವತ್ತನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ನಾವೇ ಅವರು ಮೆಟ್ಟಿಲುಗಳನ್ನು ಉಪಯೋಗಿಸುವುದಕ್ಕೆ ತಕರಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಮಗೆ ಸೇರಿದ ಜಾಗವನ್ನು ಯಾವತ್ತೂ ಸಹಾ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

(ರಘುರಾಮ. ಎನ್.ಎಸ್.)
1 ನೇಃಹೆಃ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.